# ಬಾರದ ಲೋಕಕ್ಕೆ ಸುಗಂಧ

ಅಂದು ಅಣ್ಣನವರು ನಮಗೆಲ್ಲಾ ಭಿನ್ನವಾಗಿಯೇ ಕಂಡರು. ಬೊಂಬಾಯಿಯ ಅನೇಕ ಪ್ರತಿಷ್ಠಿತ ವ್ಯಕ್ತಿಗಳು ಅಣ್ಣನಿಗೆ ಕೇಸಿನ ವಿರುದ್ಧ ಹೋರಾಡುವುದು ಬೇಡ ಎಂದು ಹೇಳಿದರೂ ಅಣ್ಣ ಒಪ್ಪಲಿಲ್ಲ. ಒಂದು ಸಂಜೆ ಬಾಪಟ್ ಎಂಬ ಯುವ ವಕೀಲ ಅಣ್ಣನ ಪರ ವಾದಿಸುವುದಾಗಿ ಕೇಳಿಕೊಂಡು ಬಂದ. ಅವನನ್ನು ನಾನೇ ಅಣ್ಣನ ಬಳಿ ಕರೆದೊಯ್ದೆ. ಅವನೊಂದಿಗೆ ಸ್ವಲ್ಪ ಹೊತ್ತು ಮಾತನಾಡಿದ ಅಣ್ಣ ಹೇಳಿದರು, 'ಬಾಪಟ್‌ರವರೇ, ಮನುಷ್ಯ ಒಂದು ನಂಬಿಕೆಯೊಂದಿಗೆ ಬದುಕಬೇಕು. ಆ ನಂಬಿಕೆಯೇ ಇಲ್ಲವಾದರೆ ಅವನು ಕಳೆದುಹೋಗುತ್ತಾನೆ. ನನ್ನ ಕಲೆಯೇ ನನ್ನ ನಂಬಿಕೆ. ಅದಕ್ಕೆ ಧಕ್ಕೆಸವಾಲು ಒದಗಿರುವಾಗ ನಾನು ಅದನ್ನು ಬಚಾವು ಮಾಡುವುದು, ಕಾಪಾಡುವುದು ನನ್ನ ಧರ್ಮ. ಆದ್ದರಿಂದ ನೀವು ನೆರವು ನೀಡಿ. ಆದರೆ ನನ್ನ ಕೇಸ್ ನಾನೇ ರಕ್ಷಣೆ ಮಾಡುತ್ತೇನೆ' ಎಂದುಬಿಟ್ಟರು. ವಿಧಿಯಿಲ್ಲದೆ ಒಪ್ಪಿಕೊಂಡ ಬಾಪಟ್, ನ್ಯಾಯ ಸಂಬಂಧವಾದ ಅನೇಕ ಪುಸ್ತಕಗಳಿಂದ ಅಣ್ಣನಿಗೆ ಟಿಪ್ಪಣಿಗಳನ್ನು ಬರೆದುಕೊಟ್ಟರು.

ಕೋರ್ಟ್‌ನಲ್ಲಿ ಮೊದಲ ದಿನ ಜಡ್ಜ್ ರಿಚರ್ಡ್‌ರ ಎದುರಿಗೆ ಕೇಶವಶಾಸ್ತ್ರಿ ಎಂಬ ಲಾಯರ್ ಅಣ್ಣನವರ ವಿರುದ್ಧ ಕೇಸನ್ನು ಮಾಡಿಸಿದರು. ಅದ್ಭುತವಾದ 'ಲಾ ಪಾಯಿಂಟ್'ಗಳನ್ನು ಸೇರಿಸಿ ಎಲ್ಲರೂ ದಿಗ್ಭ್ರಮೆಗೊಳ್ಳುವಂತೆ ವಾದಿಸಿದರು.

ಅಣ್ಣನವರು ಮಂಡಿಯವರೆಗಿದ್ದ ಕಪ್ಪು ನಿಲುವಂಗಿ, ಸಾಂಪ್ರದಾಯಿಕ ಪೇಟದೊಂದಿಗೆ ಬಂದಿದ್ದರು. ಜಡ್ಜ್‌ರವರು 'ನೀನು ಇದನ್ನು ಒಪ್ಪುತ್ತೀಯಾ ರವಿವರ್ಮ?' ಎಂದಾಗ 'ನೋ ಯುವರ್ ಮೆಜೆಸ್ಟಿ'(ಖಂಡಿತಾ ಇಲ್ಲ ಜಡ್ಜ್ ಸಾಹೇಬರೇ) ಎಂದರು. 'ಹಾಗಾದರೆ ನಿನ್ನ ಪರ ವಾದಿಸುವ ವಕೀಲರು ಯಾರು?'

'ನಾನೇ ಯುವರ್ ಆನರ್'

'ನಿಜ ನಿಜ. ಬೇರೆ ಯಾವ ವಕೀಲರು ನಿನ್ನ ಪರ ವಾದಿಸಲು ಸಿಗುವುದಂತೂ ಇಲ್ಲ' ಎಂದು ಕೇಶವಶಾಸ್ತ್ರಿ ಗೊಣಗಿದ್ದ. ನನ್ನ ಹಾಗೂ ಅಣ್ಣನವರ ಕಿವಿಗೆ ಬೀಳದಿರಲಿಲ್ಲ. ಮತ್ತೊಂದು ದಿನದ 'ಹಿಯರಿಂಗ್' ದಿನಾಂಕವನ್ನು ತಿಳಿಸಿ ಕೋರ್ಟನ್ನು ಅಡಜರ್ನ್ ಮಾಡಲಾಯಿತು. (ತತ್ಕಾಲಕ್ಕೆ ನಿಲ್ಲಿಸಲಾಯಿತು).

ಮನೆಗೆ ಹಿಂತಿರುಗಿದಾಗ ಅಣ್ಣನವರು ಸ್ಟುಡಿಯೊ ಕಡೆಗೆ ಹೋಗದೆ ನಿವಾಸದ ಕಡೆಗೆ ತಿರುಗಿದರು. ನಾನು ಅವರನ್ನು ಹಿಂಬಾಲಿಸಿದೆ. ಆ ದಿನ ಕೋರ್ಟ್‌ನಲ್ಲಿ ಅವರಿಗಾಗಿದ್ದ ಅವಹೇಳನದಿಂದ ಅವರು ತುಂಬಾ ನೊಂದಿದ್ದಾರೆಂದು ನನಗೆ ಅರಿವಿತ್ತು. 'ಅಣ್ಣಾ, ಆ ಕೇಶವಶಾಸ್ತ್ರಿ ಹೇಳಿದ್ದೆಲ್ಲ ತುಂಬಾ ಅತಿಯೆನಿಸಿತು ನನಗೆ. ನಿಮಗೆ ತುಂಬಾ ನೋವು ಕೊಟ್ಟರು' ಎಂದೆ. ಅಣ್ಣನವರು ನನ್ನ ಬೆನ್ನ ಸುತ್ತು ಕೈ ಹಾಕಿ 'ಇಂತಹ ಪರೀಕ್ಷೆಯ ಕ್ಷಣಗಳಲ್ಲೇ ನಮಗೆ ತುಂಬಾ ತಾಳ್ಮೆ ಇರಬೇಕು ರಾಜಾ, ಹೋಗು, ನನ್ನ ಬಗ್ಗೆ ತಲೆಕೆಡಿಸಿಕೊಳ್ಳದೆ ಮಲಗಿಕೋ. ನಾನೂ ಸ್ವಲ್ಪ ವಿಶ್ರಾಂತಿ ಪಡೆಯುತ್ತೇನೆ' ಎನ್ನುತ್ತಾ ತಮ್ಮ ಕೋಣೆಯೊಳಗೆ ಹೋದರು. ಅಂತಹ ಸಮಯದಲ್ಲಿ ಅಣ್ಣ ದೇವಿ ಭಗವತಿಯನ್ನು ಪ್ರಾರ್ಥಿಸುತ್ತಾ ಶಕ್ತಿ ಕೊಡುವಂತೆ ಬೇಡುತ್ತಾರೆಂದು ನನಗೆ ತಿಳಿದಿತ್ತು. ನಿಜ, ಅನೇಕ ವಿದ್ವಾಂಸರು ಪುಟಗಟ್ಟಲೆ ಬರೆದರೂ ಬಣ್ಣಿಸಲಾಗದ, ಹಲವಾರು ಉಪನ್ಯಾಸಗಳಿಂದಲೂ ಹೇಳಲಾರದ ಪುರಾಣ ಕಥನಗಳನ್ನು, ಬರಿಯ ಬಣ್ಣದ ಗೆರೆಗಳಿಂದ ಅಣ್ಣನವರು ಜೀವಂತವಾಗಿಸಿದ್ದರು. ಅದನ್ನು ಜೀರ್ಣಿಸಿಕೊಳ್ಳಲಾರದ, ಪುರಸ್ಕರಿಸಲಾರದ ಸಮಾಜ ಅವರನ್ನು ಪಾಪಿ, ಸ್ವಾರ್ಥಿ, ಮೂರ್ಖ ಎಂದೆಲ್ಲಾ ಮೂದಲಿಸಿತ್ತು. ಹೌದು ಅಣ್ಣ ಈ ಕೇಸನ್ನು ಗೆಲ್ಲುವುದು ತುಂಬಾ ಮುಖ್ಯವಾಗಿತ್ತು. ಅವರಿಗೆ ಮಾತ್ರವಲ್ಲ, ಅವರ ಸೋಲು ಇಡೀ




■ ಗೀತಾ ಸೀತಾರಾಮ್

ಕಲಾಸಾಮ್ರಾಜ್ಯಕ್ಕೆ ಒಂದು ಕಪ್ಪುಕಲೆಯಾಗಿ ಬಿಡುತ್ತದೆ. ಭಾರತೀಯ ಕಲಾವಿದರಿಗೇ ಇದೊಂದು ಮಸಿ ಬಳಿದಂತಾಗಿ ಬಿಡುತ್ತದೆ. 'ದೇವರೇ, ಅಣ್ಣನಿಗೆ ಗೆಲ್ಲಲು ವಾಗ್ಶಕ್ತಿ ಕರುಣಿಸು' ಎಂದು ಬೇಡಿಕೊಂಡೆ.

ಅಷ್ಟರಲ್ಲಿ ಪಾಚನ್ ಬಂದು ಸುಗಂಧ ಬಂದಿರುವುದನ್ನು ಹೇಳಿದ. ನಿರಾಭರಣ ಸುಂದರಿಯಾಗಿ ಶ್ವೇತವಸ್ತ್ರಧಾರಿಯಾಗಿ ಬಂದ ಸುಗಂಧಳನ್ನು ಅಣ್ಣನ ಕೋಣೆಗೆ ಕಳುಹಿಸಿದೆ. ಅವಳು ಹೊರಬಂದಾಗ ಕಣ್ಣ ತುಂಬಾ ನೀರಿತ್ತು. 'ಲಾಯರನ್ನು ಇಟ್ಟುಕೊಳ್ಳುವಂತೆ ಹೇಳಲು ಬಂದೆ, ಅವರು ಒಪ್ಪುತ್ತಿಲ್ಲ ರಾಜ, ದೇವರೇ ಅವರಿಗೆ ಶಕ್ತಿ ಕೊಡಲಿ' ಎನ್ನುತ್ತಾ ಮೆಟ್ಟಲಿಳಿದು ಹೋದಳು. ಗಿರಾವ್‌ನ ಜಿಲ್ಲಾ ಕೋರ್ಟ್‌ಗೆ ಹೋಗಬೇಕಾದ ದಿನ ಬಂದೇ ಬಿಟ್ಟಿತು. ಜಡ್ಜ್ ರಿಚರ್ಡ್ ಯೂರೋಪಿಯನ್ನರಾದರೂ ಅನೇಕ ವರ್ಷಗಳಿಂದ ಭಾರತದಲ್ಲೇ ನೆಲೆಸಿದವರು. ನ್ಯಾಯವಾದ ತೀರ್ಪಿಗೆ ಹೆಸರಾದರು.

ಅಣ್ಣ ರವಿವರ್ಮ ಮೊದಲೇ ಜಡ್ಜ್ ಸಾಹೇಬರನ್ನು ಕೇಳಿದ್ದರು. 'ನಾನು ವಕೀಲನಲ್ಲ, ಒಬ್ಬ ಚಿತ್ರ ಕಲಾವಿದನಷ್ಟೆ'. ಆದ್ದರಿಂದ ದಯವಿಟ್ಟು ನನಗೊಂದು ಕಪ್ಪುಹಲಗೆ ಸೀಮೆಸುಣ್ಣ ಮತ್ತು ಡಸ್ಟರ್ (ಅಳಿಸಲು ಬಟ್ಟೆ) ಕೊಡಬೇಕಾಗಿ ಬೇಡುತ್ತೇನೆ ಎಂದು. ಅದರಂತೆಯೇ ಈ ದಿನ ಅವರಿಗೆ ಎಲ್ಲಾ ಅಣಿ ಮಾಡಿಕೊಡಲಾಗಿತ್ತು. ಜಡ್ಜ್ ಸಾಹೇಬರ ಅಪ್ಪಣೆಯೊಂದಿಗೆ ಅಣ್ಣನವರು ತಮ್ಮ ಕೆಲಸ ಪ್ರಾರಂಭಿಸಿದರು. ಕಪ್ಪು ಹಲಗೆಯ ಮೇಲೆ ನಿದ್ರಿಸುತ್ತಿರುವ ಉಷಾ ಮತ್ತು ಅವಳ ಕನಸಿನಲ್ಲಿ ಅನಿರುದ್ಧ ಇವರ ರೇಖಾಚಿತ್ರವನ್ನು ಸೀಮೆಸುಣ್ಣದಿಂದ ಬರೆದರು. ಕೋರ್ಟ್‌ನಲ್ಲಿದ್ದವರನ್ನು 'ಇದರಲ್ಲಿ ಅಶ್ಲೀಲತೆ ಇದೆಯೋ?' ಎಂದು ಕೇಳಿದರು.

'ಇಲ್ಲ' ಒಕ್ಕೊರಲ ಉತ್ತರ. ನಂತರ ಅನಿರುದ್ಧನನ್ನು ಡಸ್ಟರ್‌ನಿಂದ ಅಳಿಸಿ 'ಈಗ?' ಎಂದರು.

'ಇಲ್ಲ' ಮತ್ತೆ ಬಂದಿತು ಉತ್ತರ. ಈಗ ಮಲಗಿರುವ ಉಷಾಳ ದೇಹದ ಮೇಲಿನ ಹಲವು ಗೆರೆಗಳನ್ನು ಅಳಿಸಿದಾಗ ಆಕೆ ನಗ್ನಳಾಗಿ ಮಲಗಿರುವಂತೆ ಕಂಡಿತು. '

'ಈಗ? ಎಂದರು ಎಲ್ಲರೂ 'ಹೌದು ಅಶ್ಲೀಲವಾಗಿದೆ' ಎಂದರು.

ಅಣ್ಣ ಸೀಮೆಸುಣ್ಣ ಕೆಳಗಿರಿಸಿ ಬೋರ್ಡ್ ಒರೆಸಿದರು. ನ್ಯಾಯಾಧೀಶರ ಕಡೆಗೆ ತಿರುಗಿ 'ಮಿ ಲಾರ್ಡ್! ನನ್ನ ಮೇಲೆ ಚಿತ್ರಗಳಲ್ಲಿ ಅಶ್ಲೀಲತೆಯ ಆರೋಪವಿದೆ. ಮೇಲಿನ ಆರೋಪಕ್ಕೆ ನಾನು ಒಂದು ಸಾಮ್ಯದೊಂದಿಗೆ ಉತ್ತರ ನೀಡಬಯಸುತ್ತೇನೆ. ನಾವು ಸಂಗೀತ ಹಾಡುವಾಗ ಆರೋಹಣ ಅವರೋಹಣ ಎರಡನ್ನೂ ಹಾಡಿದರೆ ಮಾತ್ರ ಅದು ಒಂದು ರಾಗದ ಸಂಪೂರ್ಣ ರೂಪವಾಗುತ್ತದೆ. ಉದಾಹರಣೆಗೆ ಜನ್ಯರಾಗವಾಗಿ ಸರಿಮಪನಿಸ ಎಂದು ಆರೋಹಣ ಮಾತ್ರ ಹಾಡಿದರೆ ಅದು ಮಧ್ಯಮಾವತಿಯೋ, ಶ್ರೀರಾಗವೋ, ಮಣಿರಂಗೋ ಹೇಳಲು ಸಾಧ್ಯವಿಲ್ಲ. ಆದರೆ ಅವರೋಹಣ ಹಾಡಿದಾಗ ಆಯಾ ರಾಗಗಳ ಸಂಪೂರ್ಣ ಸ್ವರೂಪ ಕಂಡುಬರುತ್ತದೆ. ಚಿತ್ರಕಲೆಯೂ ಸಂಗೀತದಂತೆಯೇ. ಅದರ ಪೂರ್ಣ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಚಿತ್ರವನ್ನು ಸಂಪೂರ್ಣವಾಗಿ ನೋಡಬೇಕು. ಒಳಗಣ್ಣು ತೆರೆದುಕೊಳ್ಳಬೇಕು. ನಿಮ್ಮ ಮುಂದೆಯೇ ಶೀಲಅಶ್ಲೀಲದ ಗೆರೆಗಳನ್ನು ಬರೆದು ತೋರಿಸಿದ್ದೇನೆ. ಅದು ಒಂದು ಡಿಗ್ರಿಯಷ್ಟೇ ವ್ಯತ್ಯಾಸ. ಎಲ್ಲಕ್ಕಿಂತ ಅಶ್ಲೀಲತೆ, ಬರೆದಿರುವ ರೇಖಾಚಿತ್ರದಲ್ಲಿ ಇರಲಿಲ್ಲ. ಅದು ಇರುವುದು ನೋಡುವವರ ದೃಷ್ಟಿಯಲ್ಲಿ. ಮುಚ್ಚಿರುವುದರ ಹಿಂದಿರುವುದನ್ನು ಊಹಿಸಿ ತೆರೆದಿಡುವುದು ಕಲಾವಿದರ ಕರ್ತವ್ಯ. ಕಲಾಕಾರ ಒಬ್ಬ ಸಂತನಂತೆ! ಅಸತ್ಯದ ಸೆರೆಯಲ್ಲಿರುವ ಸತ್ಯವನ್ನು ಹುಡುಕುವ ಸತ್ಯ ಸಂಶೋಧಕನಂತೆ! ಕಲೆಗೆ ನಗ್ನತೆಯ ಭಯವೇ ಇಲ್ಲ. ಸರಿಯಾಗಿ ಹೇಳಬೇಕೆಂದರೆ ಆ ರೀತಿಯ ನಗ್ನ ಸೌಂದರ್ಯವನ್ನು ಉತ್ಕೃಷ್ಟವಾಗಿ ರಚಿಸುವ ಕಲಾವಿದನೇ ನಿಜಕ್ಕೂ ಎಲ್ಲರಿಗಿಂತ ಶ್ರೇಷ್ಠ ಕಲಾವಿದ. ಏಕೆಂದರೆ ಅದೇ ಅಮರ ಸತ್ಯ! ಮಿಕ್ಕದೆಲ್ಲಾ ಬರೀ ಮಿಥ್ಯ! ಒಬ್ಬ ಕಲಾವಿದನ ಕಣ್ಣಿಗೆ ಅರೆಬಟ್ಟೆಯಲ್ಲಿರುವ ನಗ್ನ ಭಿಕ್ಷುಕಿಯೂ ಒಂದೇ! ಅರೆ ನಗ್ನಳಾಗಿರುವ ಅಪ್ಸರ ಸ್ತ್ರೀ ತಿಲೋತ್ತಮೆಯೂ ಒಂದೇ! ಅವನಿಗೆ ಇಬ್ಬರನ್ನು ಚಿತ್ರಿಸುವಾಗಲೂ